# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2011-12ನೇ ಅವಧಿಗೆ ಸಂಬಂಧಪಟ್ಟಂತೆ, ಈ ವರ್ಷ ಹೊಸದಾಗಿ ಆಸ್ತಿಯ ಮಾಲೀಕರಿಂದ ಘನತ್ಯಾಜ್ಯ ವಸ್ತು ವಿಲೇವಾರಿ ಉಪಕರವನ್ನು ಆಸ್ತಿ ತೆರಿಗೆ ಪಾವತಿ ಜೊತೆಯಲ್ಲಿ ಸಂಗ್ರಹಿಸಲಾಗುತ್ತಿದ್ದು, ಈವರೆಗೆ ಒಟ್ಟು 4,09,285 ತೆರಿಗೆದಾರರು ರೂ.360 ಕೋಟಿಗಳ ಆಸ್ತಿ ತೆರಿಗೆಯನ್ನು ಹಾಗೂ ರೂ.13.26 ಕೋಟಿಗಳ ಘನತ್ಯಾಜ್ಯ ವಸ್ತು ವಿಲೇವಾರಿ ಉಪಕರವನ್ನು ಪಾವತಿಸಿರುತ್ತಾರೆ. ಈಗಾಗಲೇ ನಗರ ಪಾಲಿಕೆಯ ನಿರ್ಣಯದಂತೆ ಪೂರ್ಣ ವರ್ಷದ ಆಸ್ತಿ ತೆರಿಗೆಯನ್ನು ಪಾವತಿಸುವವರಿಗೆ ಶೇ. 5% ರಷ್ಟು ರಿಯಾಯಿತಿಯನ್ನು ಪಡೆಯಲು ದಿನಾಂಕ: 30.05.2011ರ ವರೆಗೆ ಅವಕಾಶವಿರುತ್ತದೆ. ಆಸ್ತಿ ತೆರಿಗೆಯನ್ನು ದಿನಾಂಕ: 30.05.2011ರ ನಂತರ ಪಾವತಿಸುವವರಿಗೆ ಯಾವುದೇ ರಿಯಾಯಿತಿ ನೀಡಲು ಅವಕಾಶವಿರುವುದಿಲ್ಲ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಚೆಕ್ ಮುಖಾಂತರ ಆಸ್ತಿ ತೆರಿಗೆ ಪಾವತಿಸಿದ ಹಲವಾರು ಚೆಕ್‌ಗಳು ಬೌನ್ಸ್ ಆಗಿದ್ದು, ಅಂತಹವರ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲು ಸಹ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**